ದಿನಾಂಕಃ 21.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀಸವಾಲು ಶ್ರೀ. ಕೆ.ಕೆ.ಆರ್. ವಕೀಲರಿಂದ :-

ಈ ಪ್ರಕರಣದ ರೇಣುಕರಾಧ್ಯರವರ ಪತ್ನಿ ಕೆ.ಎನ್. ನಾಗರತ್ನ ನನ್ನ ಅತ್ತಿಗೆ ಅಂದರೆ ನನ್ನ ಹೆಂಡತಿಯ ಅಕ್ಕ. ಇತರೆ ವಾದಿಗಳು ನನ್ನ ಅತ್ತಿಗೆ ಮಕ್ಕಳು. ಪ್ರತಿವಾದಿ ಶಂಭುಲಿಂಗಪ್ಪ ನನ್ನ ಹೆಂಡತಿಯ ಅಣ್ಣ. ನನ್ನ ಮೂಲ ಸ್ಥಳ ಉದ್ದೂರು ಹೊಸಹಳ್ಳಿ ಗ್ರಾಮ ಎಂದರೆ ಹೌದು. ನಾವು ಹಳ್ಳಿಮೈಸೂರಿನಲ್ಲಿ ಮನೆಯನ್ನು ಕಟ್ಟಿಕೊಂಡು ಖಾಯಂ ವಾಸವಿದ್ದೇವೆ ಎಂದರೆ ಹೌದು. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಕಾಲೇಜಿನಲ್ಲಿ ನಾನು ಗುಮಾಸ್ತನಾಗಿ ಕೆಲಸ ನಿರ್ವಹಿಸುತ್ತಿದ್ದೆ. ನಾನು 15 ರಿಂದ 16 ವರ್ಷ ಗುಮಾಸ್ತನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಗೆ ಸಂಬಂಧಿಸಿದಂತೆ ಕೆಲವು ಮಾಹಿತಿ ಗೊತ್ತಿರುತ್ತದೆ. ಇನ್ನು ಕೆಲವು ಮಾಹಿತಿ ಗೊತ್ತಿರುವುದಿಲ್ಲ. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಕಾರ್ಯದರ್ಶಿಯಾಗಿ ಒಂದನೇ ಪ್ರತಿವಾದಿ ಶಂಭುಲಿಂಗಪ್ಪನವರು ಮೊದಲಿನಿಂದಲೂ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಮೊದಲಿನಿಂದಲೂ ಶಂಭುಲಿಂಗಪ್ಪ ಹಾಗೂ ಮಂಜುನಾಥ್ ರವರು ಕಾರ್ಯದರ್ಶಿಯಾಗಿದ್ದರು ಎಂದು ಉತ್ತರಿಸುತ್ತಾರೆ. ಮಂಜುನಾಥ್ ರವರು ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯಲ್ಲಿ ಅಧೀಕ್ಷಕರು ಹಾಗೂ ಪ್ರಾಂಶುಪಾಲರಾಗಿ ಕೆಲಸ ಮಾಡಿರುತ್ತಾರೆ ಎಂದರೆ ಹೌದು. ನಾನು ಗುಮಾಸ್ತನಾಗಿ ಕೆಲಸ ಮಾಡಿರುವ ಕಾರಣ ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯಿಂದ ಸಂಬಳವನ್ನು ಪಡೆದಿರುತ್ತೇನೆ ಎಂದರೆ ಹೌದು. ಮಂಜುನಾಥ್ ರವರು ಪ್ರಾಂಶುಪಾಲರಾಗಿ ಸಂಬಳ ಪಡೆಯುತ್ತಿದ್ದರು ಎಂದರೆ ಹೌದು. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಗೆ ಸಂಬಂಧಿಸಿದಂತೆ ಹಳ್ಳಿಮೈಸೂರಿನಲ್ಲಿ ಶಾಲಾ ಕಟ್ಟಡಗಳು ಇರುತ್ತದೆ ಎಂದರೆ ಹೌದು. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಕಟ್ಟಡಗಳು ಸರ್ವೆ ನಂಬರ್ 43/2 ರಲ್ಲಿ 2 ಎಕರೆ ಹಾಗೂ 43/1 ರಲ್ಲಿ 10 ಗುಂಟೆ ಪ್ರದೇಶದಲ್ಲಿ ಕಟ್ಟಡಗಳು ಇರುತ್ತದೆ.

ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಸಂಸ್ಥೆಯಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳು ಓದುತ್ತಿದ್ದರು ಎಂದರೆ ಹೌದು. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿ ರವರು ಕಾಲೇಜು ಹಾಗೂ ಹಾಸ್ಟೆಲ್ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಹಾಸ್ಟೆಲ್ ನಡೆಸುತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ. ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯ ಪಶ್ಚಿಮ ದಿಕ್ಕಿಗೆ ಹಾಸ್ಟೆಲ್ ಕಟ್ಟಡ ಇರುತ್ತದೆ ಎಂದರೆ ಸರಿಯಲ್ಲ. ಹಾಸ್ಟೆಲ್ ಬಿಲ್ಡಿಂಗ್ ಉದ್ಘಾಟನೆಯಾದಾಗ ನಾನು ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದೆ ಎಂದರೆ ಸಾಕ್ಷಿಯು ಹಾಸ್ಟೆಲ್ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಕಾಲೇಜಿನ ಕಾರ್ಯಕ್ರಮಗಳಲ್ಲಿ ವಿಡಿಯೋಗ್ರಫಿ ಮಾಡುತ್ತಿದ್ದರೋ ಇಲ್ಲವೋ ನನಗೆ ಗೊತ್ತಿರುವುದಿಲ್ಲ. ಹಾಸ್ಟೆಲ್ ಉದ್ಘಾಟನ ಕಾರ್ಯಕ್ರಮದಲ್ಲಿ ಹಾಗೂ ಇನ್ನಿತರೆ ಕಾರ್ಯಕ್ರಮಗಳಲ್ಲಿ ನಾನು , ವಾದಿ ವನಿತ, ನಾಗರತ್ನ, ಹಾಗೂ ಅಂದಿನ ತಹಶೀಲ್ದಾರ್ ಆದಂತಹ ನಾಗರಾಜ್ ರವರು, ಅಧ್ಯಕ್ಷರಾದಂತಹ ಬಸವರಾಜಯ್ಯ, ಕಾರ್ಯದರ್ಶಿಯಾದ ಶಂಭುಲಿಂಗಪ್ಪ ಇರುವ ಬಗ್ಗೆ ವಿಡಿಯೋಗ್ರಫಿ ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ಭಾರತ್ ಯುನಿವರ್ಸೆಲ್ ಎಜುಕೇಷನ್ ಸೊಸೈಟಿಯಲ್ಲಿ ಕಾನೂನು ನೆರವು ಅರಿವು ಶಿಬಿರಗಳು ನಡೆದಿರುವ ಬಗ್ಗೆ ನನಗೆ ನೆನಪಿರುವುದಿಲ್ಲ. ಕಾಲೇಜಿನಲ್ಲಿ ರಂಗಮಂದಿರ, ಹಾಗೂ ಸುಸಜ್ಜಿತವಾದಂತಹ ಗಾರ್ಡನ್ ಇರುತ್ತದೆ ಎಂದರೆ ಸರಿಯಲ್ಲ. ನಾನು ಗುಮಾಸ್ತನಾಗಿ ಕೆಲಸ ಬಿಟ್ಟಾಗ ಕಾಲೇಜಿನಲ್ಲಿ ಚಾರ್ಜ್ ಅನ್ನು ನೀಡಿರುತ್ತೇನೆ. ನಾನು ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ಸಂಸ್ಥೆ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲಾ.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ

ಓ.ಎಸ್. ನಂ. 77/2022 ಪಿ.ಡಬ್ಲೂಃ 2

ದಿನಾಂಕಃ 21.02.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು

ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಎಂ.ಕೆ.ಡಿ. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿ ಹೇಳಿರುವ ಸಂಗತಿಗಳು ಸತ್ಯವಾಗಿರುತ್ತವೆ. ಅವುಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಸದರಿ ಅಂಶಗಳನ್ನು ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ

(ಅಮರ್ ವಿ.ಎಲ್.)
ಸೀನಿಯರ್ ಸಿವಿಲ್ ಜಡ್ಜ್ ಮತ್ತು
ಜೆಎಂಎಫ್‌ಸಿ ಹೊಳೆನರಸೀಪುರ